# ಆಹಾ ಸುದ್ದಿ!

★ ಬಿಂದು




ಅಮೆರಿಕದ ಒಕ್ಲಹಾಮಾದ ನಾರ್ಮನ್ ನಗರದ ಹೊರವಲಯದಲ್ಲಿ ರೈತನೊಬ್ಬ ರಾತ್ರಿ ತನ್ನ ಕತ್ತೆಯೊಂದಿಗೆ ನಡೆದುಬರುತ್ತಿದ್ದ. ಆದರೆ ಅದ್ಹೇಗೋ ಕತ್ತೆ ತಪ್ಪಿಸಿಕೊಂಡಿತು. ರೈತ ಮನೆಗೆ ತೆರಳಿದ. ಮರುದಿನ ಆತ ದೂರು ಕೊಡುವ ಮುನ್ನವೇ ನಾರ್ಮನ್ ಪೊಲೀಸರು ದಾರಿ ಬದಿಯಲ್ಲಿ ಮಲಗಿದ್ದ ಕತ್ತೆಯನ್ನು ತಮ್ಮ ಕಾರಿನಲ್ಲಿ ಸುರಕ್ಷಿತವಾಗಿ ಕರೆತಂದು ರೈತನಿಗೆ ಒಪ್ಪಿಸಿದರು.
★ ನಮ್ಮಲ್ಲಾಗಿದ್ದರೆ ಪೊಲೀಸರು 'ಕತ್ತೆ ಬಡವ, ಸರಿಯಾಗಿ ಅಡ್ರೆಸ್ ಹೇಳು' ಎಂದು ಲಾಕಪ್‌ನಲ್ಲಿ ಅದಕ್ಕೆ 'ಪೂಜೆ' ಮಾಡುತ್ತಿದ್ದರೇನೋ?



ಈ ಸರ್ದಾರ್ಜಿ ದಂಪತಿ ಪಶ್ಚಿಮ ಯಾರ್ಕ್‌ಶೈರ್‌ನ ಬ್ರಾಡ್‌ಫೋರ್ಡ್‌ನಲ್ಲಿದ್ದಾರೆ. ನವೆಂಬರ್ ಮೊದಲ ವಾರ ಹತ್ತು ದಿನದ ಅಂತರದಲ್ಲಿ ಇಬ್ಬರೂ ತಮ್ಮ 110 ಮತ್ತು 103ನೇ ಹುಟ್ಟುಹಬ್ಬ ಆಚರಿಸಿದವರು. ಆದರೆ ಈ ಫೋಟೊ ಅದರದ್ದಲ್ಲ; ಡಿ.11ರಂದು ನಡೆದ ಇವರ ಮದುವೆಯ 90ನೇ ವಾರ್ಷಿಕೋತ್ಸವದ್ದು! 90 ವರ್ಷಗಳ ಹಿಂದೆ ಪಂಜಾಬಿನಲ್ಲಿ ಮದುವೆಯಾದ ಈ ದಂಪತಿಗೆ 8 ಮಕ್ಕಳು, 27 ಮೊಮ್ಮಕ್ಕಳು ಮತ್ತು 23 ಮರಿಮಕ್ಕಳಿದ್ದಾರೆ. ಅಂದ ಹಾಗೆ ಈತನ ಹೆಸರು ಕರಮ್‌ಚಂದ್; ಈಕೆಯ ಹೆಸರು ಕರ್ತಾರಿ ಚಂದ್.
ಪ್ರತಿನಿತ್ಯ ಹತ್ತಾರು ಡೈವೋರ್ಸ್‌ಗಳಾಗುವ ಬ್ರಿಟನ್ನಿನಲ್ಲಿ ನಮ್ಮ 'ಮೇಕ್ ಇನ್ ಇಂಡಿಯಾ' ಪ್ರಚಾರಕ್ಕೆ ಇವರನ್ನೇ ಬಳಸಿಕೊಳ್ಳಬಹುದೆ?



ಬ್ರಿಟನ್ನಿನ ಈ ಬೆಕ್ಕು ಫೇಸ್‌ಬುಕ್‌ನಲ್ಲಿ 9 ಲಕ್ಷ ಬೆಂಬಲಿಗರನ್ನು ಹೊಂದಿದೆ. ಅರ್ಧ ಮುಖ ಪೂರ್ಣ ಕಪ್ಪಾಗಿರುವ ಇದು 2009ರಲ್ಲಿ ಬೀದಿಬದಿಯಲ್ಲಿ ಸಿಕ್ಕಿದ್ದು. ಈಗಿನ ಮಾಲಕಿ ಅದನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದಾಳೆ. ಆದರೆ ಇಂಟರ್‌ನೆಟ್‌ನಲ್ಲಿ ಇದರ ಫೋಟೋ ನೋಡಿದ ಯಾರೂ ನಂಬುತ್ತಿಲ್ಲವಂತೆ. 'ಫೋಟೋಶಾಪ್ ಫೋಟೊ, ಸ್ಪ್ರೇ ಪೇಯಿಂಟ್, ಪೆಡಿಕ್ಯೂರ್ ಮಾಡಿದ್ದಾರೆ' ಎಂದೆಲ್ಲ ತಕರಾರು ತೆಗೆದಿದ್ದಾರಂತೆ.
ನಮ್ಮಲ್ಲಿ ಯಾರಾದರೂ ಜ್ಯೋತಿಷಿಯ ಬಳಿ ಈ ಬೆಕ್ಕು ಇದ್ದಿದ್ದರೆ, ಆತನಿಗೆ ಅದೃಷ್ಟ ಒದ್ದುಕೊಂಡು ಬರುತ್ತಿತ್ತು!

ಚೀನಾದ ಯಾಂಗ್ಝೊ ನಗರದಲ್ಲಿ ಇತ್ತೀಚೆಗೆ ಚಲಿಸುತ್ತಿದ್ದ ಬಸ್ ಪಕ್ಕದಲ್ಲಿ ನಿಂತು ಗಾಳಿಯಲ್ಲಿ ತೇಲಾಡುತ್ತಾ ಸಾಗಿದ ಈ ಸ್ಟಂಟ್‌ಮ್ಯಾನ್ ದೊಡ್ಡ ಸುದ್ದಿಯನ್ನೇ ಮಾಡಿದ. ಜಾಹೀರಾತು ಕಂಪೆನಿಯೊಂದು ತನ್ನ ಉತ್ಪನ್ನದ ಪ್ರಚಾರಕ್ಕಾಗಿ ಈ ಸಾಹಸ ಮಾಡಿಸಿತಂತೆ. ದಾರಿಯುದ್ದಕ್ಕೂ ಟ್ರಾಫಿಕ್ ಜಾಮ್ ಆಗಿತ್ತು. ಸಿಟ್ಟಿಗೆದ್ದ ಪೊಲೀಸರು ಬಸ್‌ಅನ್ನು ವಶಕ್ಕೆ ತೆಗೆದುಕೊಂಡು, ಚಾಲಕನ ಡ್ರೈವಿಂಗ್ ಲೈಸೆನ್ಸ್ ರದ್ದು ಮಾಡಿದ್ದಾರೆ.
ಇದೇನು ದೊಡ್ಡ ಸಾಹಸ ಬಿಡಿ. ನಮ್ಮ ಹಳ್ಳಿಗಾಡಿನಲ್ಲಿ ಪ್ರತಿದಿನ ಬೆಳಿಗ್ಗೆ ಒಬ್ಬ ಏನು, ಏಳೆಂಟು ಮಂದಿ ಚಲಿಸುತ್ತಿರುವ ಬಸ್ಸಿನ ಬಾಗಿಲಲ್ಲಿ ನೇತಾಡುತ್ತಾ ಇದಕ್ಕಿಂತ ದೊಡ್ಡ ಸಾಹಸ ಮಾಡಲ್ವೆ? ಯಾರದ್ದಾದರೂ ಲೈಸೆನ್ಸ್ ರದ್ದಾದದ್ದು ಉಂಟೆ?



1995ರಲ್ಲಿ ಇಂಗ್ಲೆಂಡಿನಲ್ಲಿ ರಸ್ತೆ ಅಪಘಾತದಲ್ಲಿ ವ್ಯಕ್ತಿಯೊಬ್ಬ ಮೃತಪಟ್ಟ. ಸ್ಥಳಕ್ಕೆ ಬಂದ ಪೊಲೀಸರಿಗೆ ಆತನ ಗುರುತು ಹಿಡಿಯಲು ಸಾಧ್ಯವೇ ಆಗದಷ್ಟು ಮುಖ-ದೇಹ ನುಜ್ಜುಗುಜ್ಜಾಗಿತ್ತು. ದೇಹದ ಪಕ್ಕದಲ್ಲಿ ಗ್ರೇಟ್‌ಫುಲ್ ಡೆಡ್ ಸಂಗೀತಗೋಷ್ಠಿಯ ಟಿಕೆಟ್, 2 ನೆಕ್ಲೆಸ್, ಬಟ್ಟೆಬರೆ, ಕೈಯಲ್ಲಿ ಸ್ಟಾರ್ ಗುರುತಿನ ಟ್ಯಾಟೂ ಇತ್ತು. ಪೊಲೀಸರು ಕಂಪ್ಯೂಟರ್‌ನಲ್ಲಿ ಆತನ ಕಲ್ಪಿತ ಚಿತ್ರ ಬಿಡಿಸಿ ವರ್ಷಾನುಗಟ್ಟಲೆ ಹುಡುಕಿದರೂ ಪ್ರಯೋಜನವಾಗಲಿಲ್ಲ. ಕೊನೆಗೆ 'ಕೇಸ್ ಕ್ಲೋಸ್' ಮಾಡಿದ್ದರು. ಆರು ತಿಂಗಳ ಹಿಂದೆ, ಪೊಲೀಸ್ ಅಧಿಕಾರಿಯೊಬ್ಬ ಫೇಸ್‌ಬುಕ್‌ನಲ್ಲಿ ವಿವರ ಹಾಕಿ ನೆರವು ಕೋರಿದ. ಪ್ರತಿದಿನ ಲಕ್ಷಾಂತರ ಜನ ಅದನ್ನು ಫಾರ್ವರ್ಡ್ ಮಾಡಿದರು. ಕಳೆದ ವಾರ ಕೊನೆಗೂ ಆತ ಯಾರೆಂದು ಪತ್ತೆಯಾಯಿತು. 20 ವರ್ಷಗಳ ಬಳಿಕ ಆತನ ತಾಯಿಗೆ ಸುದ್ದಿ ಗೊತ್ತಾಗಿ ಠಾಣೆಗೆ ಬಂದು ಸತ್ತದ್ದು ತನ್ನ ಮಗನೇ ಎಂದು ಖಚಿತಪಡಿಸಿದಳು!
ಸತ್ತವನ ಫೇಸ್ ಗುರುತೇ ಸಿಗದಿದ್ದರೂ, ಫೇಸ್‌ಬುಕ್ ನಿಂದ ಎಷ್ಟೊಂದು ಪ್ರಯೋಜನವಾಯಿತು ನೋಡಿ!